ಇಟ್ಟಿಗೆ ಉಪಯೋಗಿಸಿ ಕಟ್ಟಿಸುವುದರಲ್ಲಿ ಸಂಘಕ್ಕೆ ಆಗತ್ಯವಿಲ್ಲದ ಅಂಗಡಿಗಳು ಮತ್ತು ಹೋಟೆಲ್‌ನ್ನು ಕಟ್ಟಿಸಿ ಸುಮಾರು ಒಂದು ಲಕ್ಷದ ತೊಂಭತ್ತೈದು ಸಾವಿರ ರೂಪಾಯಿ ಬರದೇ ಇರುವುದರಲ್ಲಿ ಸಂಘದ ಕಟ್ಟಡಗಳ ರಿಪೇರಿ ಮತ್ತು ಸುಮಾರು ಒಂದು ಲಕ್ಷದ ತೊಂಭತ್ತೈದುಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿರುವ ಮಳಿಗೆಗಳು ಮತ್ತು ಹೋಟೆಲ್‌ನ್ನು ಸಹಕಾರ ಸಂಘದ ತತ್ವಕ್ಕೆ ವಿರುದ್ಧವಾಗಿ ಬಾಡಿಗೆಗೆ ಕೊಟ್ಟು ಹಸ್ತಕ್ಷೇಪ ಮಾಡಿರುವುದರಲ್ಲಿ, ಹಿಂದೆ ಸಂಘದಲ್ಲಿ ರಾಸಾಯನಿಕ ಗೊಬ್ಬರದ ವಿಭಾಗದ ಗುಮಾಸ್ತ ದುರುಪಯೋಗ ಮಾಡಿಕೊಂಡಿದ್ದ ಲಕ್ಷ ರೂಪಾಯಿಗಳ ವಿಚಾರದಲ್ಲಿ ಕೋರ್ಟಿಗೆ ಅಪೀಲು ಮಾಡದೆ ಇರುವುದರಲ್ಲಿ, ಆಗತ್ಯವಿಲ್ಲದ ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಿಕೊಂಡಿರುವುದು ಮಜಾ ಮಾಡಿರತಕ್ಕಂಥ ನೌಕರರು ಲೇಬರ್ ಕೋರ್ಟಿಗೆ ಹೋಗಿ ಇನ್ನೂ ಇತ್ಯರ್ಥ ಆಗದೆ ಉಳಿದಿರುವುದು ಸಂಘಕ್ಕೆ ಭಾರವಾಗಿರುವುದರಲ್ಲಿ, ಸಂಘದ ಚಿಲ್ಲರೆ ಶಾಖೆಯಲ್ಲಿ ಹೆಚ್ಚಿನ ಹಣ ದುರುಪಯೋಗವಾಗಿರುವುದರಲ್ಲಿ ಸಗಟು ಶಾಖೆಯ ಗುಮಾಸ್ತರನ್ನು ರಕ್ಷಿಸಿರುವ ವಿಚಾರದಲ್ಲಿ ಆಡಳಿತ ಮಂಡಳಿಯವರು ಮೋಸ ಮಾಡಿರುತ್ತಾರೆ.

ಸಂಘದ ಸದಸ್ಯರು ಹಿಂದಿನ ಮತ್ತು ಈಗಿನ ಸರ್ಕಾರಕ್ಕೆ ಅರ್ಜಿ ಮೂಲಕ ತಿಳಿಸಿದ್ದರೂ ಸಹ ಸರ್ಕಾರ ಯಾವ ಕ್ರಮವನ್ನೂ ಕೈಗೊಂಡಿರುವುದಿಲ್ಲ.

ಸಂಘದ ಹಿತ ಮತ್ತು ದುರುಪಯೋಗವಾಗಿರುವ ಆಸ್ತಿಯನ್ನು ಕಾಪಾಡುವುದರಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳ ವಿಷಯದಲ್ಲಿ ಸಹಕಾರ ಮಂತ್ರಿಗಳು ಒಂದು ಹೇಳಿಕೆ ನೀಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಚಾರ ನನ್ನೆ ದಿವಸ ಸಾಯಂಕಾಲ ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ನಾನು ವಿವರಗಳನ್ನು ತರಿಸಿಕೊಂಡು ನಾಳೆ ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಡುತ್ತೇನೆ.

(೨) ಮಂಡ್ಯ ತಾಲ್ಲೂಕ್, ಬಸರಾಳು ಹೋಬಳಿ, ಹುನಗನಹಳ್ಳಿ ಗ್ರಾಮದ ಸರ್ವೆ ನಂ. ೬೬ರನ್ನು ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ

ಶ್ರೀ ಬಿ. ದೊಡ್ಡಬೋರೇಗೌಡ.—ಮಾನ್ಯ ಅಧ್ಯಕ್ಷರೇ, ಮಂಡ್ಯ ತಾಲ್ಲೂಕ್ ಬಸರಾಳು ಹೋಬಳಿ ಹುನಗನಹಳ್ಳಿ ಗ್ರಾಮದ ಸರ್ವೆ ನಂ. ೬೬ ವಿಸ್ತೀರ್ಣ ೩೧ ಗುಂಟೆ ಮೇಲ್ಕಂಡ ವಿಸ್ತೀರ್ಣಕ್ಕೆ ೨೧ ಜನ ಖಾತೆದಾರರು ಹತ್ತು ಜನ ಸಬ್ ಖಾತೆದಾರರು ಈ ವಿಸ್ತೀರ್ಣವನ್ನು ಅಕ್ವೇರ್ ಮಾಡಿಕೊಂಡು ಈ ಸ್ಥಳವನ್ನು ಬೇರೆಯವರಿಗೆ ಕೊಟ್ಟು ಇವರ ಹಕ್ಕನ್ನು ಮೊಟಕುಗೊಳಿಸಿರುವುದು ಸರ್ಕಾರಕ್ಕೆ ಬಂದಿದೆಯೇ ಮೇಲ್ಕಂಡವರಿಗೆ ಜಮೀನನ್ನು ಉಳಿಸಿಕೊಟ್ಟು ಇವರಿಗೆ ವಸತಿ ನಿರ್ಮಾಣ ಮಾಡಿಕೊಳ್ಳಲು ಸರ್ಕಾರ ಸಹಕಾರ ನೀಡುತ್ತದೆಯೇ ಎಂದು ನಾನು ತಮ್ಮ ಮೂಲಕ ಸಂಬಂಧಪಟ್ಟ ಮಂತ್ರಿಗಳನ್ನು ಕೇಳ ಬಯಸುತ್ತೇನೆ.

MR. SPEAKER.—Hon. Minister, may please bring it to the notice of the Revenue Minister.

(೩) ಗೇರು ಸಸಿಗಳನ್ನು ಕುಂದಾಪುರ ತಾಲ್ಲೂಕಿನ ಅರಣ್ಯ ಇಲಾಖೆಯವರು ಹಂಚಿಸಿರುವ ಬಗ್ಗೆ

ಶ್ರೀ ಪುತ್ತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಕುಂದಾಪುರ ಡಿವಿಜನ್ ರೇಂಜ್ ವ್ಯಾಪ್ತಿಗೆ ಒಳಪಟ್ಟ ಮತ್ತು ಶಂಕರನಾರಾಯಣ ರೇಂಜ್ ವ್ಯಾಪ್ತಿಗೆ ಒಳಪಡುವಂತಹ ಅರಣ್ಯ ಜಮೀನಿನಲ್ಲಿ ಅಂದರೆ, ಸುಮಾರು ಇನ್ನೂರು ಎಕರೆಗೂ ಹೆಚ್ಚು ಪ್ರದೇಶದಲ್ಲಿ ಕಳೆದ ಎರಡು ವರ್ಷಗಳಿಂದ ಗೇರು ಸಸಿಗಳನ್ನು ಬೆಳೆಸಲಾಗುತ್ತಿದೆ. ಈ ರೀತಿ ಬೆಳೆಸಿದಂಥ ಗಿಡಗಳನ್ನು ಕಡಿದು ಪುನಃ ಹೊಸದಾಗಿ ಪ್ಲಾನ್ ಟೇಷನ್ ಮಾಡುವುದರಲ್ಲಿದ್ದಾರೆ. ಆದರೆ ಕಳೆದ ಎರಡು ವರ್ಷಗಳಿಂದ ಈ ಗಿಡಗಳನ್ನು ಬೆಳೆಸಲು ಸಾಕಷ್ಟು ಹಣ ಖರ್ಚು ಆಗಿದೆ. ಈಗ ಈ ಗಿಡಗಳಿಂದ ಉತ್ಪತ್ತಿ ಬರುವ ಪರಿಸ್ಥಿತಿಯಲ್ಲಿದೆ. ಇಂಥಾದ್ದರಲ್ಲಿಯೂ ಈ ತೋಟಗಳಲ್ಲಿರುವಂತಹ ಗಿಡಗಳನ್ನು ಕಡಿಯಲು ಕಾರಣವೇನೆಂದು ನನಗೆ ತಿಳಿಯಲಿಲ್ಲ. ಮುಖ್ಯವಾಗಿ ಹೈ ಈಲ್ಡ್ ಗಿಡಗಳನ್ನು ಬೆಳೆಸಬೇಕೆಂಬ ಕಾರಣದಿಂದ ಈಗಿರುವಂತಹ ಗಿಡಗಳನ್ನು